# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1151

ಮಾನ್ಯ ಸದಸ್ಯರ ಹೆಸರು : ಶ್ರೀ ಪಿ.ಆರ್. ರಮೇಶ್
(ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ: : 30.09.2020

ಉತ್ತರಿಸುವ ಮಾನ್ಯ ಸಚಿವರು : ಕೃಷಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ರೈತರು ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ವಿಮಾ ಕಂತುಗಳನ್ನು ತುಂಬಿದ್ದಾರೆ ಮತ್ತು ಎಷ್ಟು ಮೊತ್ತವನ್ನು ಪಾವತಿಸಿದ್ದಾರೆ: (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು ಮಾಹಿತಿ ನೀಡುವುದು) | ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ರೈತರು ತುಂಬಿರುವ ವಿಮಾ ಕಂತುಗಳು ಮತ್ತು ಮೊತ್ತದ ವಿವರಗಳನ್ನು (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು ಮಾಹಿತಿಯನ್ನು ದಿನಾಂಕ 03.11.2020 ರವರೆಗೆ) C.D ಪ್ರತಿಯಲ್ಲಿ ನೀಡಲಾಗಿದೆ. |
| ಆ) | ಕಳೆದ 3 ವರ್ಷಗಳಲ್ಲಿ ತೀವ್ರ ನೆರೆ ಹಾವಳಿ ಮತ್ತು ಅಕಾಲಿಕ ಮಳೆಯಿಂದ ಸಂಪೂರ್ಣ ಬೆಳೆನಾಶವಾಗಿ ಎಷ್ಟು ರೈತರು ಬೆಳೆನಾಶದ ವಿಮೆಗಾಗಿ ಅರ್ಹರಾಗಿರುತ್ತಾರೆ: (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು ಮಾಹಿತಿ ನೀಡುವುದು) | ಕಳೆದ 3 ವರ್ಷಗಳಲ್ಲಿ ತೀವ್ರ ನೆರೆ ಹಾವಳಿ ಮತ್ತು ಅಕಾಲಿಕ ಮಳೆಯಿಂದ ಸಂಪೂರ್ಣ ಬೆಳೆ ನಾಶವಾಗಿ ಬೆಳೆ ವಿಮೆಗೆ ಅರ್ಹರಾಗಿರುವ ರೈತರ ವಿವರಗಳನ್ನು (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು ಮಾಹಿತಿಯನ್ನು ದಿನಾಂಕ 03.11.2020 ರವರೆಗೆ) C.D ಪ್ರತಿಯಲ್ಲಿ ನೀಡಲಾಗಿದೆ. |
| ಇ) | ವಿಮೆ ಕಂತು ಪಾವತಿಸಿದರೂ ಸಹ ಬೆಳೆದ ಬೆಳೆಯು ನಾಶವಾಗಿ ಸರ್ಕಾರದಿಂದ ಬರತಕ್ಕಂತಹ ವಿಮೆಗಾಗಿ ಅರ್ಜಿ ಸಲ್ಲಿಸಿದರೂ ಸಹಾ ಹಲವು ರೈತರಿಗೆ ವಿಮೆ ಪರಿಹಾರ ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಇಲ್ಲ |
| ಈ) | ಕಳೆದ 3 ವರ್ಷಗಳಲ್ಲಿ ಬೆಳೆ ಹಾನಿಯಾಗಿರುವ ರೈತರ ಸಂಖ್ಯೆ ಎಷ್ಟು: ಕೇಂದ್ರ ಸರ್ಕಾರದ ವತಿಯಿಂದ ಬರಬೇಕಾದ ವಿಮೆ ಹಣದ ಮೊತ್ತವೆಷ್ಟು: (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು ಮಾಹಿತಿ ನೀಡುವುದು) | ಬೆಳೆ ವಿಮೆ ನಷ್ಟ ಪರಿಹಾರದ ಲೆಕ್ಕಾಚಾರಕ್ಕೆ ಹೋಬಳಿ/ಗ್ರಾಮ ಪಂಚಾಯತಿಯನ್ನು ಒಂದು ವಿಮಾ ಘಟಕವೆಂದು ಪರಿಗಣಿಸಲಾಗುತ್ತದೆ. ಅದರಂತೆ ಕಳೆದ 3 ವರ್ಷಗಳಲ್ಲಿ ಬೆಳೆ ಹಾನಿಯಾಗಿದ್ದು ವಿಮೆ ಹಣ ಪಾವತಿಸಿರುವ ರೈತರ ಸಂಖ್ಯೆ ವಿವರಗಳನ್ನು (ಹೋಬಳಿ /ಗ್ರಾಮ ಪಂಚಾಯತಿವಾರು ಮಾಹಿತಿಯನ್ನು ದಿನಾಂಕ 03.11.2020 ರವರೆಗೆ) C.D ಪ್ರತಿಯಲ್ಲಿ ನೀಡಲಾಗಿದೆ. |

ಸಂಖ್ಯೆ:- ಕೃಇ/122/ಕೃಕೈಲು/2020

(ಬಿ.ಸಿ.ಪಾಟೀಲ್)
ಕೃಷಿ ಸಚಿವರು